

ಸಹಿಸಿಕೊಳ್ಳಲು ಅಪಾರ ಶ್ರಮವಹಿಸಬೇಕಾಗಿದೆ.

ಹೇಗಾದರಿರಲಿ, ಇದು ನಿನ್ನ ಮನಸ್ಥಿತಿಯ ಬಗ್ಗೆ ನಾನು ಮಾಡಬಹುದಾದ ವಿಶ್ಲೇಷಣೆ. ಇದು ಸತ್ಯವಲ್ಲದೇ ಹೋದರೆ ನೀನೇ ನಿನ್ನ ವಿಶ್ಲೇಷಣೆಯನ್ನು ಮಾಡಿಕೊಂಡು ಒಂದಲ್ಲ ಒಂದು ವಿಧದಲ್ಲಿ ಈ ಅಸಾಧ್ಯ ಒತ್ತಡ-ಆತಂಕದಿಂದ ಗುಣಮುಖಳಾಗುವುದು ಉತ್ತಮ. ಗೀತೆಯ ಎರಡನೇ ಅಧ್ಯಾಯದಲ್ಲಿ ಕೃಷ್ಣ ಹೇಳುವ ನುಡಿಗಳನ್ನು ಎಚ್ಚರಿಕೆಯಿಂದ ಪರಾಮರ್ಶಿಸು. ಅಲ್ಲಿಂದ ಮುಂದೆ 12ನೇ ಅಧ್ಯಾಯವನ್ನು ಓದು, ಮನಸ್ಸಿಗೆ ನಿಜವಾದ ಶಾಂತಿ-ನೆಮ್ಮದಿ ಕಂಡುಕೊಳ್ಳಲು ಸಾಧ್ಯವಿಲ್ಲವೇ ಎಂಬುದನ್ನು ಗಮನಿಸು. ನನ್ನ ಈ ವಾದದ ಬಗ್ಗೆ ವಿವರವಾದ ಉತ್ತರವನ್ನು ನೀಡಲು ಪ್ರಯತ್ನ ಮಾಡಬೇಕಾಗಿಲ್ಲ. ನೀನು ಅಂತಹ ಒತ್ತಡಕ್ಕೆ ಒಳಗಾಗುವುದು ನನಗೆ ಇಷ್ಟವಿಲ್ಲ. ಸಾಧ್ಯವಾದಷ್ಟು ಸಾಂತ್ವನ ನೀಡುವುದು ನನ್ನ ಈ ವಾದದ ಮುಖ್ಯ ಉದ್ದೇಶ. ಒಬ್ಬನ ಇಡೀ ಜೀವನ ಬಂಡಾಯದಲ್ಲೇ ಮುಳುಗಿಹೋಗಿದ್ದಾಗ ವಾದ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ಬಹುಶಃ ನೀನು ಹಾದುಹೋಗುತ್ತಿರುವ ಈ ಯಾತನಾಮಯ ಪ್ರಕ್ರಿಯೆ ಇದೆಯಲ್ಲ, ಅದು ದೇವರ ಉಪಸ್ಥಿತಿಯ ಬಗ್ಗೆ ಸಾಕ್ಷಾತ್ಕಾರಗೊಳ್ಳುವುದಕ್ಕೂ ಮುಂಚಿನದ್ದು. ಅದು ಹಾಗಾಗಲಿ ಎಂದುಕೊಳ್ಳುತ್ತೇನೆ. ಏನೇ ಆಗಲಿ, ನಾವಿಬ್ಬರೂ ಜೈಲಿನಿಂದ ಹೊರಬಂದ ಬಳಿಕ ನೀನು ನನ್ನಿಂದ ಪ್ರತ್ಯೇಕವಾಗಿ ಬದುಕಬೇಕಾಗುತ್ತದೆಯೇ ಎಂಬ ಪ್ರಶ್ನೆಯನ್ನು ಮೊದಲು ನಿನ್ನ ಮನಸ್ಸಿನಿಂದ ಕಿತ್ತುಹಾಕು.

ಈಗ ನನ್ನ ಬಗ್ಗೆ. ನಾನು ಸಂಪೂರ್ಣ ಉಲ್ಲಸಿತನಾಗಿದ್ದೇನೆ. 64ನೇ ವಯಸ್ಸಿನಲ್ಲಿ ದೇಹವನ್ನು ಮರುರೂಪಿಸಿಕೊಳ್ಳುವ ಪ್ರಕ್ರಿಯೆ ತುಂಬಾ ನಿಧಾನ. ಇದು ನಾನು ನಿರೀಕ್ಷೆ ಮಾಡಿದ್ದಕ್ಕಿಂತಲೂ ಹೆಚ್ಚು ನಿಧಾನ. ಚೇತರಿಕೆ ವಿಚಾರದಲ್ಲಿಯೂ ಅದು ಅನ್ವಯವಾಗುತ್ತದೆ. ನಾನು ಸುಲಭವಾಗಿ 24 ಔನ್ಸ್ ಹಾಲನ್ನು ಕುಡಿಯುತ್ತಿದ್ದೇನೆ. ಅದನ್ನು ಎರಡು ಪೌಂಡ್‌ಗೆ ಹೆಚ್ಚಿಸುವ ಪ್ರಯತ್ನ ನಡೆದಿದೆ. ಡಾ.ದಿನ್‌ಶಾ ಮೆಹ್ತಾ ಅವರ ಕಾಳಜಿಯಿಂದ ಇನ್ನಷ್ಟು ಸುಧಾರಿಸಬಹುದು. ಆರೋಗ್ಯದಲ್ಲಿ ಆಗುತ್ತಿರುವ ಸುಧಾರಣೆಯ ಬಗ್ಗೆ ಸಂಪೂರ್ಣ ತೃಪ್ತನಾಗಿದ್ದೇನೆ. ಹಾಲು ಮಾತ್ರವಲ್ಲದೆ ಕಿತ್ತಳೆ ಹಾಗೂ 3ರಿಂದ ನಾಲ್ಕು ದಾಳಿಂಬೆಯ ರಸ, ಜೊತೆಗೆ ಸುಮಾರು 4 ಔನ್ಸ್ ಜೇನುತುಪ್ಪ ಸೇವಿಸುತ್ತಿರುವೆ. ನಿನ್ನೆ ತನಕ ತರಕಾರಿಯಿಂದ ಮಾಡಿದ ಸೂಪ್ ಕುಡಿಯುತ್ತಿದ್ದೆ. ಹಾಲಿನ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ಡಾ.ಮೆಹ್ತಾ ಅವರು ಇವತ್ತಿನಿಂದ ಅದನ್ನು ನಿಲ್ಲಿಸಿದ್ದಾರೆ. ಹಾಗಾಗಿ ನನ್ನ ಆಹಾರ ಮತ್ತು ಆರೋಗ್ಯದಲ್ಲಿ ಆಗುತ್ತಿರುವ ಸುಧಾರಣೆ ಬಗ್ಗೆ ಗೊಣಗುವ ಮಾತೇ ಇಲ್ಲ.

ತೀರಾ ಧಗೆಯಿಂದ ಕೂಡಿದ ಹವಾಮಾನ ಇರುವುದಾಗಿ ಹೇಳಿದ್ದಿ. ಇಲ್ಲಿ ತಣ್ಣನೆಯ ವಾತಾವರಣವಿದೆ. ಮಳೆಗಾಲದಲ್ಲಿ ಬದುಕಲಿಕ್ಕೆ ತುಂಬಾ ಪ್ರಶಸ್ತವಾದ ತಾಣವೆಂದರೆ ಪೂನಾ. ಈ ತಿಂಗಳ 16ರಂದು ದೇವದಾಸ್, ಲಕ್ಷ್ಮಿಯನ್ನು ಮದುವೆಯಾಗುತ್ತಿದ್ದಾನೆ; ಆವತ್ತು ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ಆದರೆ ಈ ಮದುವೆ ಈಗಿನ ಹಿಂದೂ ಸಂಪ್ರದಾಯದ ಉಲ್ಲಂಘನೆಯಾದ ಕಾರಣ ಈ ತಿಂಗಳ 21ರಂದು ಇದರ ನೋಂದಣಿ ಕೂಡ ನಡೆಯುತ್ತದೆ.

ಪ್ರೀತಿಯಿಂದ

ಬಾಪು

**ಪರ್ಣಕುಟಿ, ಪೂನಾ (07-06-1933 )**